

# ಸೌಂದರ್ಯವರ್ಧಕ ಹುಣಸೆ ಹಣ್ಣು

ಹುಣಸೆ ಹಣ್ಣನ್ನು ಸೌಂದರ್ಯವರ್ಧಕವಾಗಿ ಬಳಸಬಹುದು. ಇದರಿಂದ ಕ್ಲೆನ್ಸಿಂಗ್ ಲೋಶನ್, ಸ್ಕ್ರಬ್, ಹೇರ್ ಟಾನಿಕ್ ಮುಂತಾದವನ್ನು ತಯಾರಿಸಿ ಬಳಸಿದರೆ ಸೌಂದರ್ಯ ವೃದ್ಧಿಯಾಗುತ್ತದೆ.

■ ಶಾರದಾ ಪಿ.ಬಿ.



ಹುಣಸೆ ಹಣ್ಣು ಅಡುಗೆಗೆ ಮಾತ್ರ ಸೀಮಿತ ಎಂಬ ವಾದವನ್ನು ಹುಸಿಯಾಗಿಸಿ ಇದು ಸೌಂದರ್ಯವರ್ಧನೆಗೂ ಸಹಕಾರಿ ಎಂಬ ಅಂಶವನ್ನು ಸಾಬೀತುಪಡಿಸಿದೆ. ಇದು ಅತ್ಯುತ್ತಮ ಸೌಂದರ್ಯವರ್ಧಕವೂ ಹೌದು. ಇದನ್ನು ಬಳಸಿ ಚರ್ಮದ ಕ್ಲೆನ್ಸಿಂಗ್ ಲೋಶನ್ ಸ್ಕ್ರಬ್ ಹಾಗೂ ಕೂದಲಿನ ಟಾನಿಕ್ ಅನ್ನು ಸಂಪೂರ್ಣವಾಗಿ ತಯಾರಿಸಬಹುದು. ವಿಟಮಿನ್ 'ಸಿ' ಇರುವ ಹುಣಸೆ ತ್ವಚೆಯ ಹಾಗೂ ಕೂದಲಿನ ಆರೋಗ್ಯವನ್ನು ಸಂರಕ್ಷಿಸಿ ಸೌಂದರ್ಯ ಹೆಚ್ಚಿಸುತ್ತದೆ.

ಹುಣಸೆ ಹಣ್ಣಿನ ಕ್ಲೆನ್ಸಿಂಗ್ ಲೋಶನ್

- ಬಿಸಿ ನೀರಿನಲ್ಲಿ ಹುಣಸೆಯನ್ನು ನೆನೆಸಿಡಿ. ಸ್ವಲ್ಪ ಸಮಯದ ಬಳಿಕ ನೀರನ್ನು ಸೋಸಿ ಅದಕ್ಕೆ ಒಂದು ಚಮಚ ನಿಂಬೆ ರಸ ಹಾಗೂ ಅರ್ಧ ಚಮಚ ಜೇನುತುಪ್ಪ ಬೆರೆಸಿ ಹತ್ತಿಯನ್ನು ಬಳಸಿ ಮುಖ ಹಾಗೂ ಕುತ್ತಿಗೆಗೆ ಹಚ್ಚಿ 10 ನಿಮಿಷ ಆದ ಮೇಲೆ ತೊಳೆಯಿರಿ. ತ್ವಚೆಯ ಕಪ್ಪು ಕಲೆಗಳನ್ನು ನಿವಾರಿಸಲು ಇದು ಉಪಯುಕ್ತ.
- 2 ಚಮಚ ಹುಣಸೆ ರಸದೊಂದಿಗೆ ಒಂದು ಚಮಚ ಟೀ ಡಿಕಾಕ್ಷನ್ ಬೆರೆಸಿ ಹಚ್ಚುವುದರಿಂದ ಚರ್ಮ ಶುಭ್ರವಾಗುತ್ತದೆ. ಇದರಲ್ಲಿರುವ ವಿಟಮಿನ್ 'ಸಿ' ಚರ್ಮದ ಯೌವ್ವನ ಕಾಪಾಡುತ್ತದೆ.
- ಒಣ ಚರ್ಮ ಇದ್ದರೆ ಒಂದು ಚಮಚ ಹುಣಸೆ ರಸ ಹಾಗೂ ಒಂದು ಚಮಚ ಹಸಿ ಹಾಲನ್ನು ಸೇರಿಸಿ ಲೇಪಿಸಿ 15 ನಿಮಿಷ ಬಿಟ್ಟು ತೊಳೆದರೆ ಚರ್ಮ ಕೋಮಲವಾಗುತ್ತದೆ.
- ಎಣ್ಣೆ ಚರ್ಮದವರು ಹುಣಸೆ ರಸ ಹಾಗೂ